**ಸಂ:ಜಿಸಕಅ/ಬೆಂಗ್ರಾ/ಲೆಕ್ಕ/ಸಿಆರ್ 68/09-10**

**ಜಿಲ್ಲಾಧಿಕಾರಿಯವರ ಕಛೇರಿ,**
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:14-01-2010

**ಟೆಂಡರ್ ಪ್ರಕಟಣೆ**

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖಾ ಮುಖಾಂತರ ವಿದ್ಯಾರ್ಥಿನಿಲಯ ಸುಧಾರಣೆಗಾಗಿ ಹಾಸಿಗೆ, ಹೊದಿಕೆ ಟ್ರಂಕು, ಪಾತ್ರೆ ಪರಿಕರ ಹಾಗೂ ಕ್ರೀಡಾ ಸಾಮಾಗ್ರಿ ಸರಬರಾಜು ಮಾಡಲು ಟೆಂಡರ್ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಆದೇಶ ಸಂಖ್ಯೆ:ಸಕಇ/267/ಪಕವಿ/2009 ದಿ: 30-09-2009.
2) ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಸಮಿತಿ ಸಭೆಯ ನಡವಳಿಗಳು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸಲಾಗುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಒಟ್ಟು 31 ವಿದ್ಯಾರ್ಥಿ ನಿಲಯಗಳ ನಿಲಯಾರ್ಥಿಗಳಿಗೆ ಹಾಸಿಗೆ-ಹೊದಿಕೆ, ಟ್ರಂಕ್, ಪೀಠೋಪಕರಣಗಳು, ಪಾತ್ರೆಗಳು, ಕ್ರೀಡಾ ಸಾಮಾಗ್ರಿಗಳು ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ 2009-10ನೇ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಿದೆ. ಈ ಅನುದಾನವನ್ನು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಮಂಜೂರಾತಿ ಸಂಖ್ಯೆಗೆ ಅನುಗುಣವಾಗಿ ಸಾಮಾಗ್ರಿಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರಡಿ ದ್ವಿ-ಲಕೋಟೆ ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸರಬರಾಜು ಸಂಸ್ಥೆಗಳು/ತಯಾರಕ ಸಂಸ್ಥೆಗಳು ಟೆಂಡರ್ ಅರ್ಜಿಗಳನ್ನು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಛೇರಿಯ ವೇಳೆಯಲ್ಲಿ ರೂ.1000-00ಗಳನ್ನು (ಒಂದು ಸಾವಿರ ರೂ. ಮಾತ್ರ) ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಹೆಸರಿಗೆ ಪಡೆದಿರುವ ಡಿ.ಡಿ.ಯನ್ನು ಪಾವತಿಸಿ ಪಡೆಯಬಹುದು ಟೆಂಡರ್ ಅರ್ಜಿಗಳನ್ನು ಎರಡು ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು. ಟೆಂಡರ್‌ನಲ್ಲಿ ಒದಗಿಸಬೇಕಾದ ಎಲ್ಲಾ ದಾಖಲೆಗಳನ್ನು ಮತ್ತು ಇ.ಎಂ.ಡಿ.ಗಳನ್ನು ಇಟ್ಟಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ಪ್ರಥಮವಾಗಿ ತೆರೆಯಲಾಗುವುದು. ಟೆಕ್ನಿಕಲ್‌ಬಿಡ್ ಲಕೋಟೆಯಲ್ಲಿ ಇರಬೇಕಾದ ಎಲ್ಲಾ ದಾಖಲೆಗಳು ಸರಿಯಾಗಿದ್ದಲ್ಲಿ ಮಾತ್ರ 2ನೇ ಲಕೋಟೆಯಾದ ದರಪಟ್ಟಿ ಲಕೋಟೆಯನ್ನು ತೆರೆಯಲಾಗುವುದು.

1) ಟೆಂಡರ್ ಅರ್ಜಿಗಳನ್ನು ದಿನಾಂಕ 16-01-2010 ರಿಂದ 28-01-2010ವರೆಗೆ ಪಡೆಯಬಹುದು.
2) ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಮೊಹರು ಮಾಡಿದ ಎರಡು ಲಕೋಟೆ ಪದ್ಧತಿಯಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಗೆ ಸಲ್ಲಿಸಬಹುದು. ಟೆಂಡರ್ ಅರ್ಜಿಗಳನ್ನು ಕಡೆಯ ದಿನಾಂಕ:15-02-2010 ಮಧ್ಯಾಹ್ನ 3.00 ಗಂಟೆಯೊಳಗೆ ಸಲ್ಲಿಸುವುದು.
3) ಮೊಹರಾಗಿರುವ ಟೆಕ್ನಿಕಲ್ ಬಿಡ್ ಲಕೋಟೆಗಳನ್ನು ದಿನಾಂಕ:15-02-2010ರಂದು ಸಂಜೆ 4.30 ಗಂಟೆಗೆ ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇಲ್ಲಿ ಜಿಲ್ಲಾ ಸಮಿತಿಯ ಸಮ್ಮುಖದಲ್ಲಿ ತೆರೆಯಲಾಗುವುದು. ಟೆಂಡರ್ ಅರ್ಜಿಗಳನ್ನು ಸಲ್ಲಿಸಿದ ಸಂಸ್ಥೆಗಳ ಪ್ರತಿನಿಧಿ ಈ ಸಮಯದಲ್ಲಿ ಹಜರಿರಬಹುದಾಗಿದೆ.
4) ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯವರ ಕಛೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದಾಗಿದೆ.

**ನಿಬಂಧನೆಗಳು:**

1) ಸ್ಪೆಷಿಫಿಕೇಷನ್ ಪ್ರಕಾರ ಪೂರೈಸಲ್ಪಡುವ ಸಾಮಗ್ರಿಗಳು ಉತ್ತಮ ಗುಣಮಟ್ಟದ್ದಾಗಿರಬೇಕು. ಮತ್ತು ಮಾರುಕಟ್ಟೆ ಬೆಲೆಗೆ ಯೋಗ್ಯವಾಗಿರಬೇಕು.

2) ಟೆಂಡರ್ ಸಲ್ಲಿಸುವ ಸಂಸ್ಥೆಯು ಕರ್ನಾಟಕ ಶಾಪ್ಸ್ ಅಂಡ್ ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಕಾಯಿದೆ ಪ್ರಕಾರ ನೋಂದಣಿ ಪಡೆದಿರಬೇಕು. ಮತ್ತು ಟೆಂಡರ್‌ಗಿಟ್ಟ ಸಾಮಾಗ್ರಿಗಳನ್ನು ಉತ್ಪಾದನೆ ಮಾಡುವಂತಹ/ಸಗಟು ಮಾರಾಟ ಮಾಡುವಂತಹ ಸಂಸ್ಥೆಯಾಗಿರಬೇಕು.

3) 2007-08 ಮತ್ತು 2008-09ನೇ ಸಾಲಿನ ಆಡಿಟ್ ವರದಿ ಬ್ಯಾಲೆನ್ಸ್ ಶೀಟ್‌ನೊಂದಿಗೆ ಚಾರ್ಟೆಡ್ ಅಕೌಂಟೆಂಟ್ ರವರಿಂದ ದೃಢೀಕರಿಸಿ ಸಲ್ಲಿಸಬೇಕು.

4) ಆಸಕ್ತಿಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳವರು ಟೆಂಡರ್‌ನಲ್ಲಿ ನಮೂದಿಸಿದ ಎಲ್ಲಾ ನಾಲ್ಕು ಗುಂಪುಗಳಲ್ಲಿಯ ಎಲ್ಲಾ ಸಾಮಾಗ್ರಿಗಳಿಗೆ ಅಥವಾ ಯಾವುದಾದರೂ ಒಂದು ಗುಂಪಿನ ಎಲ್ಲಾ ಸಾಮಾಗ್ರಿಗಳಿಗೆ ದರಗಳನ್ನು ನಮೂದಿಸ ಬೇಕಾಗಿರುತ್ತದೆ. (ಆಯಾ ಗುಂಪಿನ ಒಟ್ಟು ಪರಿಮಾಣದ ಕಡಿಮೆ ದರಗಳನ್ನು ಅಂಗೀಕರಿಸುವ ಷರತ್ತಿಗೊಳಪಟ್ಟಿರುತ್ತದೆ.

5) ಟೆಂಡರನ್ನು ಮೊಹರು ಮಾಡಿದ ಲಕೋಟೆಯ ಮೇಲೆ "ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್" ಎಂದು ಸ್ಪಷ್ಟವಾಗಿ ನಮೂದಿಸಬೇಕು.

6) ಯಶಸ್ವಿ ಟೆಂಡರ್‌ದಾರರು ಸಾಮಗ್ರಿಗಳನ್ನು ಖರೀದಿ ಆದೇಶ ನೀಡಿದ 15 ದಿನದೊಳಗಾಗಿ ಆಯಾಯ ವಿದ್ಯಾರ್ಥಿ ನಿಲಯಗಳಿಗೆ ಸರಬರಾಜು ಮಾಡಲು ಶಕ್ತರಿರಬೇಕು. ಸಾಗಾಣಿಕೆ ವೆಚ್ಚವನ್ನು ಪ್ರತ್ಯೇಕವಾಗಿ ನೀಡಲಾಗುವುದಿಲ್ಲ. ಸರಬರಾಜು ಮಾಡುವ ಸಮಯದಲ್ಲಿ ಆಗಬಹುದಾದ ನಷ್ಟಕ್ಕೆ ಇಲಾಖೆಯಾಗಲೀ, ಸರ್ಕಾರವಾಗಲೀ ಜವಾಬ್ದಾರರಾಗಿರುವುದಿಲ್ಲ.

7) ಯಶಸ್ವಿ ಟೆಂಡರುದಾರರು ಸರಬರಾಜು ಮಾಡುವ ಮಾದರಿ ವಸ್ತುಗಳನ್ನು ಪ್ರದರ್ಶಿಸಿ, ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆ ಪಡೆದ ನಂತರ ಒಪ್ಪಿತ ಮಾದರಿ ವಸ್ತುಗಳನ್ನೇ ಸರಬರಾಜು ಮಾಡಬೇಕು.

8) ಸರಬರಾಜು ಮಾಡಬೇಕಾದ ವಸ್ತುಗಳನ್ನು ಮಾದರಿಗಳೊಂದಿಗೆ ಪರಿಶೀಲಿಸಿ ಮಾದರಿಗಳಿಗೆ ತಾಳೆಯದಲ್ಲಿ ಮಾತ್ರ ಸಾಮಗ್ರಿಗಳ ದಾಸ್ತಾನು ದೃಢೀಕರಣವನ್ನು ಬಿಲ್ಲುಗಳ ಮೇಲೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ ಸ್ವೀಕರಿಸಿದ ತರುವಾಯ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

9) ಟೆಂಡರ್ ಸಲ್ಲಿಸುವ ಸಂಸ್ಥೆ ಕಪ್ಪು ಪಟ್ಟಿಯಲ್ಲಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು.

10) ಚುನಾಯಿತ ಸದಸ್ಯರು ಮತ್ತು ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿಲ್ಲ.

11) ಟೆಂಡರನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರ ಜಿಲ್ಲಾ ಸಮಿತಿ ಹೊಂದಿರುತ್ತದೆ.

12) ಅನುಮೋದಿತ ಟೆಂಡರ್‌ದಾರರು ನಿಗಧಿತ ವೇಳೆಯಲ್ಲಿ ಸಾಮಗ್ರಿಗಳನ್ನು ಸರಬರಾಜು ಮಾಡದಿದ್ದಲ್ಲಿ ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೆ ನಿಯಮಾನುಸಾರ ಟೆಂಡರ್‌ದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ಜರುಗಿಸಲಾಗುವುದು.

13) ಯಶಸ್ವಿ ಟೆಂಡರ್‌ದಾರರಿಗೆ ಇ.ಎಂ.ಡಿ. ಮೊತ್ತವನ್ನು ಸಾಮಗ್ರಿಗಳನ್ನು ಸರಬರಾಜು ಮಾಡಿದ ನಂತರ ಹಿಂತಿರುಗಿಸಲಾಗುವುದು. ಇ.ಎಂ.ಡಿ ಹಣಕ್ಕೆ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.

14) ಅವಧಿ ಮೀರಿ ಬಂದ ಟೆಂಡರ್ ಲಕೋಟೆಗಳನ್ನು ಸ್ವೀಕರಿಸಲಾಗುವುದಿಲ್ಲ.

15) ಸಾಮಗ್ರಿಗಳನ್ನು ಸರಬರಾಜು ಮಾಡಲು ಆಯ್ಕೆಯಾದ ಟೆಂಡರ್‌ದಾರರು ಟೆಂಡರ್‌ನ ಎಲ್ಲಾ ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ರೂ.100-00ಗಳ ಛಾಪಾ ಕಾಗದದಲ್ಲಿ ಕರಾರು ಬರೆದು ಕೊಡಬೇಕು.

16) ಟೆಂಡರ್‌ಫಾರಂನ್ನು ರೂ.1000-00ಗಳನ್ನು ಡಿ.ಡಿ. ಮೂಲಕ ಪಾವತಿಸಿ ಪಡೆಯಬೇಕು. ಹಾಗೂ ಈ ಹಣವನ್ನು ಮರು ಪಾವತಿಸಲಾಗುವುದಿಲ್ಲ.

17) ಟೆಂಡರ್ ಅರ್ಜಿಯಲ್ಲಿ ನಮೂದಿಸಿರುವ ಸಾಮಗ್ರಿಗಳ ಪರಿಮಾಣವನ್ನು ಅನುದಾನ ಲಭ್ಯತೆಗನುಗುಣವಾಗಿ ಪರಿಷ್ಕರಿಸುವ ಷರತ್ತಿಗೊಳಪಟ್ಟಿದೆ.

18) ಪ್ರಕಟಣೆಯೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿಯ ಎಲ್ಲಾ 4 ಗುಂಪುಗಳಲ್ಲಿ ನಮೂದಿಸಿರುವ ಸಾಮಾಗ್ರಿಗಳಿಗೆ ದರಪಟ್ಟಿ ಸಲ್ಲಿಸುವುದು. ಪ್ರತಿಯೊಂದು ಸಾಮಗ್ರಿಗಳಿಗೆ ಹಾಗೂ 4 ಗುಂಪುಗಳ ಪೈಕಿ ಎಲ್ಲಾ ಗುಂಪುಗಳ ಅಥವಾ ಯಾವುದಾದರು ಒಂದು ಗುಂಪಿಗೆ ದರಪಟ್ಟಿ ಸಲ್ಲಿಸಲು ಇಚ್ಚಿಸುವವರು ಆಯಾಯ ಗುಂಪಿನ ಎಲ್ಲಾ ಸಾಮಾಗ್ರಿಗಳಿಗೆ ಕಡ್ಡಾಯವಾಗಿ ದರಗಳನ್ನು (ಅಂಕಿಗಳಲ್ಲಿ) ನಮೂದಿಸುವುದು.

**<u>1ನೇ ಲಕೋಟೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳು:(ಟೆಕ್ನಿಕಲ್‌ಬಿಡ್ ಕವರ್)</u>**

1) ಟೆಂಡರ್‌ದಾರರು ಹಿಂದಿನ 2 ವರ್ಷಗಳಲ್ಲಿ ಪ್ರತಿ ವರ್ಷ ಕನಿಷ್ಠ ರೂ.20.00ಲಕ್ಷಗಳ ವಹಿವಾಟು ನಡೆಸಿರುವ ಬಗ್ಗೆ ಪ್ರಮಾಣ ಪತ್ರ ಲಗತ್ತಿಸಬೇಕು. ಈ ಬಗ್ಗೆ 2007–08 ಹಾಗೂ 2008–09ನೇ ಸಾಲಿನ ಆಡಿಟ್ ವರದಿಯನ್ನು ಸಲ್ಲಿಸುವುದು.
2) ಟೆಂಡರ್‌ದಾರರು ಹೊಂದಿರುವ ಆದಾಯ ತೆರಿಗೆ ಪ್ಯಾನ್ ಕಾರ್ಡ್ ಮತ್ತು ಸಂಖ್ಯೆ ನಮೂದಿಸುವುದು ಮತ್ತು 31–03–2009 ರವರೆಗೆ ಆದಾಯ ತೆರಿಗೆ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು.
3) ಟೆಂಡರ್‌ದಾರರು ವ್ಯಾಟ್ ಸಂಖ್ಯೆ ಹೊಂದಿರಬೇಕು.(ಸಕ್ಷಮ ಪ್ರಾಧಿಕಾರದಿಂದ ಪಡೆದ ಪತ್ರದ ಪ್ರತಿ ಲಗತ್ತಿಸುವುದು ಮತ್ತು 31–03–2009 ರವರೆಗೆ ವ್ಯಾಟ್ ಪಾವತಿ ಬಗ್ಗೆ ದಾಖಲೆ ಸಲ್ಲಿಸುವುದು).
4) ಇ.ಎಂ.ಡಿ ಮೊತ್ತ ರೂ.1.40 ಲಕ್ಷದ ಡಿ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಿಂದ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಹೆಸರಿಗೆ ಪಡೆದು ಲಗತ್ತಿಸುವುದು.
5) ಟೆಂಡರ್ ಫಾರಂನಲ್ಲಿ ನಮೂದಿಸಿದ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ ಸೂಕ್ತ ಪ್ರಾಧಿಕಾರದಿಂದ ಪಡೆದಿರುವ ಪರವಾನಗಿ ಸಂಖ್ಯೆ ನಮೂದಿಸುವುದು ಮತ್ತು ಚಾಲ್ತಿ ವರ್ಷಕ್ಕೆ ನವೀಕರಿಸಿದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು.
6) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಗೆ ಸರಬರಾಜು ಮಾಡಿದ ಬಗ್ಗೆ ಇತ್ತೀಚಿನ 2 ವರ್ಷಗಳ ಸರಬರಾಜಿನ ದೃಢೀಕರಣ ಪತ್ರ ಸಲ್ಲಿಸುವುದು.

**<u>2ನೇ ಲಕೋಟೆಯಲ್ಲಿ ಸಲ್ಲಿಸಬೇಕಾದ ಮಹಿತಿ:</u>** (ಪೈನಾನ್ಸಿಯಲ್ ಬಿಡ್ ಕವರ್ ಸರಬರಾಜು ಮಾಡಬೇಕಾದ ಪ್ರತಿ ಸಾಮಗ್ರಿಗಳಿಗೆ ಕಡ್ಡಾಯವಾಗಿ ದರಗಳನ್ನು ನಮೂದಿಸಿ ದರಪಟ್ಟಿ ಸಲ್ಲಿಸುವುದು)

<u>ಸರಬರಾಜು ಮಾಡಬೇಕಾದ ಸಾಮಗ್ರಿಗಳು, ಅವುಗಳ ವಿವರ ಮತ್ತ ಬೇಕಾದ ಅಂದಾಜು ಪರಿಮಾಣ ವಿವರ.</u>

| ಕ್ರ ಸಂ | ಬೇಕಾಗುವ | | |
|---|---|---|---|
| | ವಸ್ತುಗಳ ಹೆಸರು | ವಸ್ತುಗಳ ವಿವರ | ಅಂದಾಜು ಪ್ರಮಾಣ |
| | **ಅ)ಹಾಸಿಗೆ ಹೊದಿಕೆ:** | | |
| 1 | ಜಮಖಾನ (ಭವಾನಿ) | 34" ಅಗಲ X 72" ಉದ್ದ, ತೂಕ 1000 ಗ್ರಾಂ | 900 |
| 2 | ಬೆಡ್‌ಶೀಟ್ (ಸೊಲ್ಲಾಪುರ) | ಹ್ಯಾಂಡ್‌ಲೂಮ್ ಬೆಡ್‌ಶೀಟ್ 60" X 90", ತೂಕ 1200 ಗ್ರಾಂ | 930 |
| 3 | ಬ್ಲಾಂಕೆಟ್ /ವುಲ್ಲನ್. | 54" X 84" ಇಂಚು, | 1010 |
| 4 | ಫೋಮ್ ಮತ್ತು ನಾರಿನ ಹಾಸಿಗೆ–ದಿಂಬು ಸೇರಿ. | ಉತ್ತಮ ಗುಣಮಟ್ಟದ ಕರ್ಲಾನ್ ಹಾಸಿಗೆ 6 ಅಡಿ ಉದ್ದ X 2 1/2 ಅಡಿ ಅಗಲ ಮತ್ತು ದಪ್ಪ 3 ಇಂಚು, 16 ಕೆ.ಜಿ. ತೂಕದ್ದು, ಮತ್ತು ಫೈಬರ್ ಕಾಟನ್ ದಿಂಬು 600 ಗ್ರಾಂ ತೂಕದ್ದು ದಿಂಬು ಕವರ್ ಸಹಿತ. | 345 |
| 5 | ಹತ್ತಿಯ ಹಾಸಿಗೆ ಮತ್ತು ದಿಂಬು | ಹಾಸಿಗೆ ಮತ್ತು ದಿಂಬು ಉತ್ತಮ ಗುಣಮಟ್ಟದ ಹತ್ತಿ ಉಪಯೋಗಿಸಿ, ಹ್ಯಾಂಡ್‌ಲೂಮ್ ಬಟ್ಟೆಯಲ್ಲಿ ಮಾಡಿದ 6ಅಡಿ ಉದ್ದ X 2 1/2ಅಡಿ ಅಗಲ, 13ಕೆಜಿ ತೂಕದ್ದು, ದಿಂಬು ಮತ್ತು ದಿಂಬಿನ ಕವರ್ ಸಹಿತ. | 345 |
| 6 | ಸ್ಟೀಲ್ ಕಾಟ್ಸ್ | 6 ಅಡಿ ಉದ್ದ, 2 1/2 ಅಡಿ ಅಗಲ, ಕಾಲು ಮತ್ತು ಪಟ್ಟಿ 16 ಗೇಜ್‌ವುಳ್ಳ ಸ್ಟೀಲ್‌ನಿಂದ ಮಾಡಿರುವಂತಹದ್ದು ಹಾಗೂ ಪ್ಲೈವುಡ್ ಶೀಟ್ 6 ಅಡಿ X 2 1/2ಅಡಿ ಅಗಲ ಮತ್ತು 30 ಎಂ.ಎಂ. ದಪ್ಪವಿರುವಂತದ್ದು ಒಟ್ಟು ತೂಕ 40 ಕೆ.ಜಿ ಇರುವಂತದ್ದು. | 373 |
| **ಆ)** | **ಜಿಂಕ್ ಟ್ರಂಕ್** | ಫ್ರೈಮ್ ಜಿಂಕ್ ಶೀಟ್‌ನಿಂದ ಮಾಡಿದ್ದು, 24 ಗೇಜ್, ಸೈಜ್ 30" X 17" X 11" | 1195 |
| | **ಇ) ಕ್ರೀಡಾ ಸಾಮಗ್ರಿಗಳು** | | |
| 1 | ಕೇರಂ ಬೋರ್ಡ್, ಪಾನ್‌ಗಳು ಮತ್ತು ಸ್ಟ್ರೈಕರ್ ಸೇರಿ | 32" X 32", 1.5"ಫ್ಲೈವಾಟರ್ ಫ್ರೂಪ್–ಒಳ್ಳೆಯ ಗುಣಮಟ್ಟದ | 87 |

| | | | |
|---|---|---|---|
| | | ಗುಣಮಟ್ಟದ್ದು | |
| 2 | ಕ್ರಿಕೆಟ್ ಸೆಟ್ | 2 ಬ್ಯಾಟ್, 6 ವಿಕೆಟ್, 4 ಸ್ಟಂಪ್ಸ್, 6 ಟೆನ್ನಿಸ್ ಬಾಲ್ ಇರುವುದು, ಒಳ್ಳೆಯ ಗುಣಮಟ್ಟದ್ದು ಕಿಟ್ ಬ್ಯಾಗ್‌ನೊಂದಿಗೆ | 43 |
| 3 | ಸ್ಕಿಪ್ಪಿಂಗ್ ರೋಪ್ | 8ಅಡಿ, ವುಡನ್ ಹ್ಯಾಂಡಲ್ ಮತ್ತು ಬಾಲ್ ಬೇರಿಂಗ್, ನೈಲಾನ್ ದಾರದೊಂದಿಗೆ | 177 |
| 4 | ಫುಟ್‌ಬಾಲ್ | ಸೆಟ್ ನಟ್‌ನೊಂದಿಗೆ, ಸಿನ್‌ಥೆಟಿಕ್ ಮೌಲ್ಡೆಡ್(ವಾಟರ್ ಫ್ರೂಫ್) ವಿತ್ ಪುಟ್‌ಬಾಲ್– ಒಳ್ಳೆಯ ಗುಣಮಟ್ಟದ್ದು | 66 |
| 5 | ರಿಂಗ್ (ಟೆನ್ನಿ ಕ್ವೈಟ್) | ಸ್ಪೌಂಜ್ ಫಿಲ್ಡ್ | 37 |
| 6 | ಶಟಲ್ ರಾಕೆಟ್ | ಶಟಲ್ ಕಾಕ್, 2 ಶಟಲ್ ರಾಕೆಟ್, 1 ಶಟಲ್ ಕಾಕ್ ಬಾಕ್ಸ್ ಔಟ್ ಡೋರ್ | 139 |
| | **ಈ) ಪಾತ್ರೆಗಳು** | | |
| 1 | ಸ್ಟೇನ್‌ಲೆಸ್ ಸ್ಟೀಲ್ ಊಟದ ತಟ್ಟೆಗಳು | 11 ಇಂಚು ಸುತ್ತಲತೆ, 22 ಗೇಜ್ 450ಗ್ರಾಂ ತೂಕ, ಉತ್ತಮ ಗುಣಮಟ್ಟದ್ದು. | 1035 |
| 2 | ಸ್ಟೇನ್‌ಲೆಸ್ ಸ್ಟೀಲ್ ಲೋಟಗಳು | 250ಮಿಲಿ ಹಿಡಿಸುವಂತಹದ್ದು, 22 ಗೇಜ್ ಇರುವಂತಹದ್ದು, ಉತ್ತಮ ಗುಣಮಟ್ಟದ್ದು. | 1035 |
| 3 | ಇಂಡಾಲಿಯಂ ಸಾಂಬಾರ್, ರೈಸ್ ಮತ್ತು ಮುದ್ದೆ ಪಾತ್ರೆ, ಮುಚ್ಚಳ ಸೇರಿ | 25" ಅಗಲ X 11" ಉದ್ದ, ತೂಕ 12.100 ಗ್ರಾಂ | 43 |
| 4 | ಸ್ಟೇನ್‌ಲೆಸ್ ಸ್ಟೀಲ್ ಬಕೆಟ್ (ದೊಡ್ಡದ್ದು) | 15ಲೀ. ಸಾಮರ್ಥ್ಯ 2ಕೆಜಿ ತೂಕ 22 ಗೇಜ್ ಇರುವಂತಹದ್ದು, ಉತ್ತಮ ಗುಣಮಟ್ಟದ್ದು. | 105 |
| 5 | ಸ್ಟೇನ್‌ಲೆಸ್ ಸ್ಟೀಲ್ ಬಕೆಟ್ (ಚಿಕ್ಕದ್ದು) | 10ಲೀ. ಸಾಮರ್ಥ್ಯ 1.3ಕೆಜಿ ತೂಕ 22 ಗೇಜ್ ಇರುವಂತಹದ್ದು, ಉತ್ತಮ ಗುಣಮಟ್ಟದ್ದು. | 65 |
| 6 | ಸ್ಟೇನ್‌ಲೆಸ್ ಸ್ಟೀಲ್ ನೀರಿನ ಜಗ್, ಮುಚ್ಚಳ ಸೇರಿ | 2ಲೀ. ಸಾಮರ್ಥ್ಯ, 22 ಗೇಜ್ | 140 |
| 7 | ಪ್ಲಾಸ್ಟಿಕ್ ನೀರಿನ ಡ್ರಂ, ಒಳ್ಳೆಯ ಗುಣಮಟ್ಟದ್ದು | 25 ಲೀ. ಸಾಮರ್ಥ್ಯ | 104 |
| 8 | ಪ್ಲಾಸ್ಟಿಕ್ ನೀರಿನ ಡ್ರಂ, ಒಳ್ಳೆಯ ಗುಣಮಟ್ಟದ್ದು | 50ಲೀ. ಸಾಮರ್ಥ್ಯ | 100 |
| 9 | ಸ್ಟೇನ್‌ಲೆಸ್ ಸ್ಟೀಲ್ ಬೇಸಿನ್, ಮುಚ್ಚಳ ಸೇರಿ | 15" ಡಯಾ, 1 ಕೆಜಿ ತೂಕ | 68 |
| 10 | ಸ್ಟೇನ್‌ಲೆಸ್ ಸ್ಟೀಲ್ ರೈಸ್ ಸ್ಪೂನ್ | ಸಾಮಾನ್ಯ ಅಳತೆ, 18 ಗೇಜ್, 12 ಉದ್ದ | 68 |
| 11 | ಸ್ಟೇನ್‌ಲೆಸ್ ಸ್ಟೀಲ್ ಸಾಂಬಾರ್ ಸ್ಪೂನ್ | ಸಾಮಾನ್ಯ ಅಳತೆ, 18 ಗೇಜ್, 16 ಉದ್ದ | 68 |
| 12 | ಸ್ಟೇನ್‌ಲೆಸ್ ಸ್ಟೀಲ್ ನೀರಿನ ಡ್ರಂ, ಮುಚ್ಚಳ ಸೇರಿ | 15" ಅಗಲ X 21" ಉದ್ದ, 6 ಕೆಜಿ ತೂಕ, 22 ಗೇಜ್ | 52 |
| 13 | ಕಬ್ಬಿಣದ ದೋಸೆ ಹೆಂಚು | 20" ಡಯಾ, 6 ಕೆಜಿ ತೂಕ | 4 |
| 14 | ಪ್ಲಾಸ್ಟಿಕ್ ಬಿಂದಿಗೆ | ದೊಡ್ಡದ್ದು, ಉತ್ತಮ ಗುಣಮಟ್ಟದ್ದು. | 177 |
| 15 | ಕಬ್ಬಿಣದ ಪರಾತ್ | 4 ಅಡಿ ಉದ್ದ, 3.5 ಡಯಾ, 12 ಗೇಜ್ | 32 |
| 16 | ರೆಫ್ರಿಜರೇಟರ್<br>(ಪ್ರತಿಷ್ಠಿತ ಕಂಪನಿ) | ಸಾಮರ್ಥ್ಯ: 360 ಲೀಟರ್‌ಗಳು<br>ಸ್ಟೆಬಿಲೈಜರ್ ಫ್ರೀ ಆಪರೇಷನ್, ಡೋರ್ ಕೂಲಿಂಗ್ ಟೆಕ್ನಾಲಜಿ, ಕನ್‌ವರ್ಟಿಬಲ್ ಬಾಕ್ಸ್, ಫ್ರೀಜೆಬಲ್ ಮೈಕ್ರೋವೇವ್ ಬಾಕ್ಸ್, ವಿಟಮಿನ್ ಪ್ಲಸ್, ಎಗ್ ಕಂ ಐಸ್ ಟ್ರೇ, ಫ್ರೆಶ್ನರೈಸರ್ ವಿತ್ ಸಿಲ್ವರ್ ಐಂನ್ಸ್, ಸೆಲ್ ಫ್ರೆಶ್ಟ್ ಕ್ರಿಸ್‌ಪರ್, ಆಂಟಿ ಬ್ಯಾಕ್ಟೀರಿಯಾ ಡೋರ್ ಗ್ಯಾಸ್‌ಕೆಟ್, ವಿ.ಸಿ.ಎಂ.ಡೋರ್ ಫಿನಿಶ್.<br>ಕಲರ್: ಗ್ಲಾಸಿ ಸಿಲ್ವರ್<br>ಉತ್ತಮ ಗುಣಮಟ್ಟದ್ದು. | 10 |

| | | | |
|---|---|---|---|
| 17 | ವಾಟರ್ ಫ್ಯೂರಿಫೈಯರ್ | ಕಮರ್ಷಿಯಲ್ ಆರ್.ಓ. ಸಿಸ್ಟಂ<br>(ರಿವರ್ಸ್ ಓಸ್‌ಮೋಸಿಸ್ ಫ್ಯೂರ್ ವಾಟರ್ ಸಿಸ್ಟಂ)<br>25 ರಿಂದ 50 ಲೀ/ಗಂಟೆಗೆ<br>ದೊಡ್ಡದ್ದು, ಉತ್ತಮ ಗುಣಮಟ್ಟದ್ದು.(ಒಳ್ಳೆಯ ಬ್ರಾಂಡ್ ಕಂಪನಿಯದ್ದು) | 26 |

**ಜಿಲ್ಲಾಧಿಕಾರಿ,**
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಪ್ರತಿಯನ್ನು:**

1) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳುರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಉಪ ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
4) ಕಛೇರಿ ಪ್ರಕಟಣಾ ಫಲಕಕ್ಕೆ.
5) ಕಛೇರಿ ಪ್ರತಿಗಳು.